**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರಃ 279 /2019
ಪಿ.ಡಬ್ಲ್ಯೂ : 1

ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: **3** ನೇ ಪ್ರತಿವಾದಿ ಪರ ಶ್ರೀ ಎ. ಜೆ ಎಸ್.ಯವರಿಂದ

1. ನನ್ನ ಗಂಡನ ಹೆಸರು ಜಯರಾಮ ರಾವ್ ಕಿನ್ನಿಗೋಳಿ. ನಾನು ಮದುವೆ ಆಗಿದ್ದು 1992 ರಲ್ಲಿ . ನನ್ನ ಗಂಡನ ಊರು ಮಂಗಳೂರು ಸಮೀಪದ ಕಿನ್ನಿಗೋಳಿ. ನನಗೆ ಅರ್ಜುನ ಹಾಗೂ ಅಕ್ಷಯ ಎಂಬ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರ ವಿಧ್ಯಾಭ್ಯಾಸ ಆಗಿದ್ದು ಕಿನ್ನಿಗೋಳಿಯಲ್ಲಿ. ಅವರು ಈಗ ವಿಧ್ಯಾಭ್ಯಾಸ ಮುಗಿಸಿ ಬೆಂಗಳೂರಿನಲ್ಲಿ ನೌಕರಿಯಲ್ಲಿರುತ್ತಾರೆ. ನನ್ನ ಗಂಡ ಕಿನ್ನಿಗೋಳಿಯಲ್ಲಿ ಪ್ರೆಸ್ ನಲ್ಲಿ ಇರುತ್ತಾರೆ. ನಾನು ಎಸ್. ಎಸ್.ಎಲ್.ಸಿ ಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಮತದಾನದ ಚೀಟಿ ಹಾಗೂ ಆಧಾರ್ ಕಾರ್ಡ್ ನಲ್ಲಿ ಕಿನ್ನಿಗೋಳಿ ವಾಸಿ ಎಂದು ಕಂಡು ಬರುತ್ತದೆ ಎಂದರೆ ಸರಿ.

2. ನಾನು 1992 ರಿಂದ ಕಿನ್ನಿಗೋಳಿ ವಾಸಿ ಆಗಿದ್ದು ಅಲ್ಲಿಯೂ ಇರುತ್ತೇನೆ, ಇಲ್ಲಿಯೂ ಇರುತ್ತೇನೆ. ಯಾವುದೇ ದಾಖಲೆಯಲ್ಲಿ ನಾನು ಗೋಪಾಡಿ ವಾಸಿ ಅಂತ ಕಂಡು ಬರುವುದಿಲ್ಲ. 1 ನೇ ಪ್ರತಿವಾದಿ ಗೀತಾ ಬೆಂಗಳೂರಿನ ರಾಜಾಜಿನಗರದ ವಾಸಿ. ಅವರು ಅವರ ಮಕ್ಕಳೊಂದಿಗೆ ವಾಸ ಇರುತ್ತಾರೆ. ಅಲ್ಲಿ ಅವರ ಗಂಡನ ಮನೆ ಇತ್ತು. 2 ನೇ ಪ್ರತಿವಾದಿ ಅವರ ಗಂಡನ ಜೊತೆಗೆ ಬೆಂಗಳೂರಿನಲ್ಲಿ ವಾಸ ಇರುತ್ತಾರೆ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**